

# ಮತ್ಸ್ಯ ದುರಂತ ಸ್ಮಾರಕ!

ಚಿತ್ರಬರಹ:
**ಎಮ್.ಎನ್. ಜೋಷಿ ಮೈಸೂರು**

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕು ಶಿಶಿಲ ಗ್ರಾಮದ ಕಪಿಲಾ ನದಿಯ ಬಳಿ ಶಿಶಿಲೇಶ್ವರ ದೇವಾಲಯದ ಹತ್ತಿರ ಬಹಳ ಅಪರೂಪದ ಮತ್ಸ್ಯ ಸ್ಮಾರಕವೊಂದಿದೆ.'ಮತ್ಸ್ಯ ದುರಂತ ಸ್ಮಾರಕ!' ಎಂದೇ ಇದಕ್ಕೆ ಹೆಸರು.

ಈ ಸ್ಮಾರಕದ ಹಿನ್ನೆಲೆಯಲ್ಲಿ ದುರಂತ ಘಟನೆಯೊಂದು ಅಡಗಿದೆ ಎನ್ನುವುದು ಕುತೂಹಲಕರ ಸಂಗತಿ. ಕಪಿಲಾ ನದಿಗೆ ಸಮೀಪದಲ್ಲಿರುವ ಶಿಶಿಲೇಶ್ವರ ದೇವಾಲಯಕ್ಕೆ ಭೇಟಿ ಕೊಡುವವರು ತಮ್ಮ ಜೊತೆ ತಂದ ಅರಳು, ಅಕ್ಕಿ ಅಥವಾ ಪುರಿಯನ್ನು ನದಿಯ ಮೀನುಗಳಿಗೆ ಆಹಾರವಾಗಿ ಎಸೆಯುವರು. ಮೀನುಗಳು ಗುಂಪು ಗುಂಪಾಗಿ ಬಂದು ತಿನ್ನುವುದು ನೋಡಿ ಸಂತೋಷ ಪಡುವರು. ಈ ಮೀನುಗಳಿಗೆ 'ದೇವರ ಮೀನು' ಎಂದು ಹೆಸರು. ದೇವರ ಮೀನನ್ನು ಯಾರೂ ಹಿಡಿದು ತಿನ್ನುವುದಿಲ್ಲ. ಅದು ಪಾಪದ ಕಲ್ಪನೆ, ನಂಬಿಕೆ.

1996ರ ಮೇ 25ರಂದು ಬೇಸಿಗೆಯ ದಿನಗಳಲ್ಲಿ ನದಿಯಲ್ಲಿ ನೀರು ಕಡಿಮೆ ಇದ್ದಾಗ, ನೀರಿಗೆ ಹೇಗೋ ವಿಷ ಬೆರೆತಿದ್ದರಿಂದ ಸುಮಾರು ಏಳೆಂಟು ಟ್ರಕ್ ತುಂಬುವಷ್ಟು ಮೀನುಗಳು ಆಗ ಸತ್ತುಹೋದವು. ಈ ದುರ್ಘಟನೆಗೆ ಜನ ತುಂಬ ನೊಂದರು. ದುರಂತದಿಂದ ಕಳವಳಗೊಂಡ ಶಿಶಿಲೇಶ್ವರ ದೇವಾಲಯದ ಕಮಿಟಿಯವರು ಶಿಲೆಯಲ್ಲಿ ಸುಮಾರು 4 ಅಡಿ ಉದ್ದದ ಮತ್ಸ್ಯವೊಂದನ್ನು ನಿರ್ಮಿಸಿ ನದಿಯ ಬಳಿಯೆ ಸ್ಥಾಪಿಸಿ, 'ಮತ್ಸ್ಯ ದುರಂತ ಸ್ಮಾರಕ' ಎಂದು ನಾಮಕರಣ ಮಾಡಿದರು.

ದುರಂತ ಘಟನೆಯಿಂದ ಮಡಿದ ಮೀನುಗಳಿಗೆ ಈ ರೀತಿ ಶ್ರದ್ಧಾಂಜಲಿ ಅರ್ಪಣೆಯಾಗಿದ್ದು ವಿಶೇಷವೇ ಸರಿ. ಶಿಶಿಲ ಗ್ರಾಮಕ್ಕೆ ಬರುವವರೆಲ್ಲ ದೇವಾಲಯ, ಮತ್ಸ್ಯ ದುರಂತ ಸ್ಮಾರಕ ನೋಡುವುದರ ಜೊತೆಗೆ, ಕಪಿಲಾ ನದಿಗೆ ಅಡ್ಡಲಾಗಿ ಕಟ್ಟಿರುವ ಸುಂದರ ತೂಗು ಸೇತುವೆ ಮತ್ತು ಸುತ್ತಮುತ್ತಲ ವನಸಿರಿ ಕೂಡ ಆನಂದಿಸಬಹುದು.

